Date :29-02-2016

# ಶೀಘ್ರ 8500 ಎಂ.ಟನ್ ಆಮದು ಬೇಳೆಕಾಳು ಪೂರೈಕೆ.

ಅಕ್ರಮ ದಾಸ್ತಾನು ವಿರುದ್ಧ ಕಾರ್ಯಾಚರಣೆಯಲ್ಲಿ ಸಂಗ್ರಹಿಸಿದ 116334.85 ಎಂ.ಟನ್ ಬೇಳೆಕಾಳುಗಳನ್ನು ಸೆಪ್ಟೆಂಬರ್ 23, 2016 ರಂದು ಮಾರುಕಟ್ಟೆಗೆ ಬಿಡುಗಡೆಗೊಳಿಸಲಾಗಿದೆಯೆಂದು ಕೇಂದ್ರ ಆಹಾರ ಮಂತ್ರಿ ರಾಮ್ ವಿಲಾಸ್ ಪಾಸ್ವಾನ್ ರಾಜ್ಯಸಭೆಗೆ ಲಿಖಿತ ಉತ್ತರದ ಮೂಲಕ ತಿಳಿಸಿದರೆನ್ನಲಾಗಿದೆ. ಎಂ.ಎಂ.ಟಿ.ಸಿ. ಮೂಲಕ ಬೇಳೆಕಾಳು ಆಮದು ಮಾಡಲಾಗುತ್ತಿದ್ದು ಶೀಘ್ರ 8500 ಎಂ.ಟನ್ ಬೇಳೆಕಾಳುಗಳ ಪೂರೈಕೆ ನಿರೀಕ್ಷಿಸಲಾಗಿದೆಯೆಂದರು.

ಹೊಸ ಬೆಳೆಯ ಬೇಳೆಕಾಳು ಉತ್ಪಾದನಾ ಕೊರತೆಯಿಂದ ಬೆಲೆ ಹೆಚ್ಚಳವಾಗಿ ಭಾರತ ಬೇಳೆಕಾಳು ಮಾರುಕಟ್ಟೆಯಲ್ಲಿ ತೀವ್ರ ಒತ್ತಡವನ್ನು ಕಂಡಿದೆ. ಹಲವು ಕಾರಣಗಳಿಂದ ಬೇಳೆಕಾಳು ದರ ಹೆಚ್ಚಳವಾಗಿದ್ದು ಬೇಡಿಕೆ ಮತ್ತು ಪೂರೈಕೆಯ ನಡುವೆ ಅಗಾಧ ವ್ಯತ್ಯಾಸ ಕಂಡುದರಿಂದ ದರ ತೀವ್ರ ಹೆಚ್ಚಳವಾಯಿತು. ಅವುಗಳಲ್ಲಿ ಅಕ್ರಮ ದಾಸ್ತಾನು ಕೂಡ ಒಂದು ಕಾರಣ/ 1955 ಅವಶ್ಯಕ ಸಾಮಗ್ರಿಗಳ ಕಾಯಿದೆಯ ಪ್ರಕಾರ ಅಕ್ರಮ ದಾಸ್ತಾನಿನ ವಿರುದ್ಧ ರಾಜ್ಯ ಸರಕಾರಗಳು ಕಾರ್ಯಾಚರಣೆ ನಡೆಸಲು ಕೇಂದ್ರ ಸರಕಾರ ಸೂಚಿಸಿತು. ಇದರಿಂದಾಗಿ ದರ ಸ್ವಲ್ಪಮಟ್ಟಿನ ಇಳಿಕೆಯಾಗಿದೆ.

2ನೇ ಸುಧಾರಿತ ಮುಂಚಿತ ಬೆಳೆಯ ಅಂದಾಜಿನ ಪ್ರಕಾರ 2016 ರಲ್ಲಿ ಭಾರತ 17.33 ಮಿಲಿಯನ್ ಟನ್ ಬೇಳೆಕಾಳುಗಿಂತ 17.15 ಎಂ.ಟನ್ ಸ್ವಲ್ಪ ಮಟ್ಟಿನ ಹೆಚ್ಚಳ ಕಾಣಬಹುದೆನ್ನಲಾಗಿದೆ.

ಕೆನಡಾದಿಂದ ಭಾರತ ಬೇಳೆಕಾಳು ಆಮದು ಮಾಡುತ್ತಿದ್ದು, ಕೆನಡಾಕ್ಕೆ ಭಾರತ ಅತಿ ದೊಡ್ಡ ಬೇಳೆಕಾಳು ರಫ್ತು ಮಾರುಕಟ್ಟೆಯಾಗಿವೆ. ಈ ವರ್ಷ ಈವರೆಗೆ ಭಾರತ ಕೆನಡಾದಿಂದ ಹಳದಿ ಲೆಂಟಲ್‌ಗಳನ್ನು ಅತಿ ಹೆಚ್ಚು ಆಮದು ಮಾಡಿದ ದೇಶವಾಗಿದ್ದು, ಮುಂದೆಯೂ ಭಾರತ ಪ್ರಬಲ ಆಮದು ರಾಜ್ಯ ಹಾಗೂ 2017 ರಲ್ಲಿಯೂ ಪ್ರಬಲ ಆಮದು ದೇಶವಾಗಲಿದೆಯೆಂದು ಕೆನಡಾದ ವಿಶ್ಲೇಷಕರ ಅಭಿಪ್ರಾಯವೆನ್ನಲಾಗಿದೆ.